**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 232/2017
ಪಿಡಬ್ಲು : 8 ಸಿಡಬ್ಲು : 10

ಸಾಕ್ಷಿಯ ಹೆಸರು : ಕಿರಣ ಚೆನ್ನಬಸಪ್ಪ ಪೋಳ
ವಯಸ್ಸು : 24 ವರ್ಷ
ಉದ್ಯೋಗ : ನಿರುದ್ಯೋಗಿ
ವಾಸ್ತವ್ಯ : ಮುನವಳ್ಳಿ
ದಿನಾಂಕ : 10-01-2020 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ನನ್ನ ಮಾವ . ಮೃತ ಪರಶುರಾಮ ಶೇರಖಾನೆ ರವರು ನನ್ನ ತಾಯಿಯ ತಂದೆ . ಚಾಸಾ-8 ನನ್ನ ದೊಡ್ಡ ಮಾವ . ಚಾಸಾ-9 ಗೊತ್ತು . ಆರೋಪಿತರು ಗೊತ್ತು . ದಿನಾಂಕಃ 05-04-2017 ರಂದು ಬೆಳಗ್ಗೆ 9.00-10.00 ಗಂಟೆಗೆ ನಾವೆಲ್ಲರೂ ಸೇರಿ ಹೊಲದಲ್ಲಿ ಕಲ್ಲು ಒಡೆಸುವ ಕೆಲಸಕ್ಕೆ ಹೋಗಿದ್ದೆವು . ಬಿಸಿಲು ಇದಿದ್ದರಿಂದ ಮದ್ಯಾಹ್ನ 12.00 ಗಂಟೆಗೆ ಮೃತ ನನ್ನ ಅಜ್ಜ ಪರಶುರಾಮ ರವರು ಆರೋಪಿತರ ಶೆಡ್ಡಿನ ಪಕ್ಕದಲ್ಲಿ ಬೇವಿನ ಮರದ ನೆರಳಿಗೆ ನಾನು ನಿಲ್ಲುತ್ತೇನೆ ಎಂದು ಅಲ್ಲಿಗೆ ಹೋದರು .

ಆರೋಪಿತರೆಲ್ಲರೂ ಸೇರಿ ನನ್ನ ಅಜ್ಜನಿಗೆ ಡೋರ ಸೂಳೆ ಮಗನೆ , ಬೋಸಡಿ ಮಗನೆ , ನಾವು ಜಮೀನನ್ನು ತೆಗೆದುಕೊಳ್ಳಬೇಕಾಗಿತ್ತು , ನೀವು ಖರೀದಿ ಮಾಡಿ ಕಲ್ಲು ತೆಗೆಸಲು ಬಂದಿದ್ದೀರಾ ಎಂದು ಬೈದರು ಮತ್ತು ಹೊಡೆಯುತ್ತಿದ್ದರು . ಆಗ ಆರೋಪಿ-1 ಕಲ್ಲು ತೆಗೆದುಕೊಂಡು ನನ್ನ ಅಜ್ಜನ ಎಡಗಡೆ ಕಿವಿ ಮತ್ತು ತಲೆಗೆ ಹೋಡೆದ , ಆರೋಪಿ-2 ಬಡಿಗೆಯಿಂದ ನನ್ನ ಅಜ್ಜನ ಬಲಗೈ ಭುಜಕ್ಕೆ ಹೊಡೆದ , ಆರೋಪಿ-3 ನನ್ನ ಅಜ್ಜನ ಎಡಗಾಲು ಮತ್ತು ಎಡಗೈಗೆ ಕಟ್ಟಿಗೆಯಿಂದ ಹೊಡೆದ .

ನಂತರ ನಾವು ಬಿಡಿಸಲು ಹೋದಾಗ ಅಷ್ಟರಲ್ಲಿ ಆರೋಪಿ-1 ಕಲ್ಲಿನಿಂದ ನನ್ನ ಅಜ್ಜನ ಬಾಯಿಗೆ ಹೊಡೆದ . ಆಗ ನನ್ನ ಅಜ್ಜನ 2 ಹಲ್ಲುಗಳು ಬಿದ್ದವು . ನಾವು ಹೋಗುವಷ್ಟರಲ್ಲಿ ಆರೋಪಿತರ

ಕೈಯಲ್ಲಿರುವ ಬಡಿಗೆ ಮತ್ತು ಕಲ್ಲು ಎಸೆದು ಹೋದರು . ನಂತರ ಆರೋಪಿತರು ಈ ಸಲ ಉಳಿದುಕೊಂಡಿದ್ದೀರಿ ಇನ್ನೊಂದು ಸಲ ನೋಡಿಕೊಳ್ಳುತ್ತೇವೆ ಎಂದು ಓಡಿ ಹೋದರು . ನಂತರ ನನ್ನ ಅಜ್ಜನನ್ನು ಮುಧೋಳದ ನಾಯಕ ಆಸ್ಪತ್ರೆಗೆ ಕರೆದುಕೊಂಡು ಬಂದೆವು . 8 ತಾರೀಕು ತನಕ ಅಲ್ಲಿ ಚಿಕೀತ್ಸೆ ನೀಡಲಾಯಿತು . ನಂತರ ಹೆಚ್ಚಿನ ಚಿಕೀತ್ಸೆಗೆ 8 ನೇ ತಾರೀಕಿನಂದು ಬೆಳಗಾವಿಯ lakeview ಆಸ್ಪತ್ರೆಗೆ ಕರೆದುಕೊಂಡು ಬಂದೆವು . lakeview ಆಸ್ಪತ್ರೆಯಲ್ಲಿ ನಾನು ಇರಲಿಲ್ಲ . ನಂತರ ನನ್ನ ಅಜ್ಜ ದಿನಾಂಕಃ 22-04-2017 ರಂದು ಚಿಕೀತ್ಸೆ ಫಲಕಾರಿಯಾಗದೇ ಮರಣ ಹೊಂದಿರುತ್ತಾರೆ .

ನನ್ನ ಅಜ್ಜನಿಗೆ ಹೊಡೆದ ಕಲ್ಲು , ದೊಣ್ಣೆ ನೋಡಿದರೆ ಗುರುತಿಸುತ್ತೇನೆ . ಅವುಗಳನ್ನು ಮುಮಾ-1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ . ನನ್ನ ಅಜ್ಜ ಹಾಕಿಕೊಂಡು ಶರ್ಟು ಮತ್ತು ಛತ್ರಿ ನೋಡಿದರೆ ಗುರುತಿಸುತ್ತೇನೆ . ಅವುಗಳನ್ನು ಮುಮಾ-3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ . ಆ ದಿವಸ ನನ್ನ ಅಜ್ಜನಿಗೆ ಹೊಡೆದ ವ್ಯಕ್ತಿಗಳು ನ್ಯಾಯಾಲದ ಮುಂದಿರುವ ಆರೋಪಿತರಾಗಿದ್ದಾರೆ . ಪೋಲಿಸರು ನನ್ನ ವಿಚಾರ ಮಾಡಿದಾಗ ನಾನು ಹೇಳಿಕೆ ಕೊಟ್ಟಿರುತ್ತೇನೆ .

**ಪಾಟೀ ಸವಾಲು: ಶ್ರೀ. ಬಿ ಎಸ ಡಿ ವಕೀಲರಿಂದ ಆರೋಪಿತರ ಪರವಾಗಿ**

ಆರೋಪಿ ಪರ ವಕೀಲರು ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರರನ್ನು ಸಂಬಂಧಿಕ ಸಾಕ್ಷಿಗಳನ್ನು ಎಲ್ಲರನ್ನೂ ಒಂದೇ ದಿವಸ ಪಾಟೀ ಸವಾಲು ಮಾಡುವ ಬಗ್ಗೆ ದಂಡ ಪ್ರಕ್ರೀಯಾ ಸಂಹಿತೆ ಕಲಂ 323(2) ರ ಅಡಿಯಲ್ಲಿ ಸಲ್ಲಿಸಿದ್ದು ಅರ್ಜಿಯನ್ನು ದಿನಾಂಕಃ 27-09-2019 ರಂದು ಪುರಸ್ಕರಿಸಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಎಂ ಹೆಚ ಅಣ್ಣಯ್ಯನವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.